ಸಹಜವಾಗಿ ಒಬ್ಬಳು ತನಿಖಾಧಿಕಾರಿ ಹೇಗೆ ನಡೆದುಕೊಳ್ಳುತ್ತಾಳೆಯೋ ಹಾಗೆಯೇ ತೆರೆಯ ಮೇಲೆ ಕಾಣಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಈ ಚಿತ್ರದ ವೈದೇಹಿ ಎನ್ನುವ ಪಾತ್ರ ಬುದ್ಧಿವಂತಿಕೆಯ ಮೂಲಕವೇ ಎಲ್ಲ ಸವಾಲುಗಳನ್ನೂ ಎದುರಿಸಿ ಗೆಲ್ಲುವಂಥ ಹೆಣ್ಣುಮಗಳು.

◆ **ಇಷ್ಟು ವರ್ಷಗಳ ನಟನಾಪ್ರಯಾಣ ನಿಮ್ಮ ವ್ಯಕ್ತಿತ್ವವನ್ನು ಹೇಗೆ ರೂಪಿಸಿದೆ?**

ನನ್ನ ನಟನೆ ಆರಂಭಿಸಿದ್ದು 16 ವರ್ಷದವಳಾಗಿದ್ದಾಗ. ಈಗ ನನಗೆ ಇಪ್ಪತ್ತೇಳೂವರೆ ವರ್ಷ. ಸುಮಾರು 12 ವರ್ಷಗಳ ಕಾಲ ನಾನು ಏನೇ ಕಲಿತಿದ್ದರೂ ಅದು ಚಿತ್ರರಂಗದಿಂದಲೇ. ನಾನು ಬೆರೆತಿದ್ದು, ಓಡಾಡಿರುವುದು, ಸ್ನೇಹ ಬೆಳೆಸಿಕೊಂಡಿರುವುದು, ಕಿತ್ತಾಡಿರುವುದು ಎಲ್ಲವೂ ಚಿತ್ರರಂಗದ ಜನರ ಜೊತೆಯಲ್ಲಿಯೇ. ತುಂಬ ಒಳ್ಳೆಯ ಸ್ನೇಹಿತರು ಸಿಕ್ಕಿದ್ದಾರೆ. ಹಲವರು ಪರಿಚಯವಾಗಿದ್ದಾರೆ. ನನಗೆ ಪ್ರವಾಸ ಎಂದರೆ ತುಂಬ ಇಷ್ಟ. ಇಲ್ಲಿ ನನ್ನ ಕೆಲಸದೊಟ್ಟಿಗೆ ಪ್ರವಾಸ ಮಾಡಲೂ ಅವಕಾಶ ಸಿಕ್ಕಿದೆ. ನನ್ನ ಪಾಲಿಗೆ ಇದೊಂದು ಕಲಿಕಾಪ್ರಯಾಣ.

ಇಲ್ಲಿ ಹಲವು ಕೆಟ್ಟ ಅನುಭವಗಳೂ ಆಗಿವೆ. ಆ ಅನುಭವಗಳು ನನಗೆ ಸಾಕಷ್ಟು ಸಂಗತಿಗಳನ್ನು ಕಲಿಸಿವೆ. ನನ್ನನ್ನು ತಿದ್ದಿವೆ. ನನಗೆ ಯಾರಾದರೂ ಬುದ್ಧಿ ಹೇಳಿ ಕಲಿಯುವುದಕ್ಕಿಂತ ನಮಗೇ ಅನುಭವ ಆದಾಗ ತುಂಬ ಬಲವಾಗಿ ಕಲಿಯುತ್ತೇವಂತೆ. ಅದು ನನ್ನ ಅನುಭವಕ್ಕೆ ಬಂದಿವೆ. ಇಲ್ಲಿ ಮಾಡಿದ ತಪ್ಪುಗಳಿಂದ ಕಲಿತ ಪಾಠಗಳನ್ನು ನಾನು ಮರೆಯುವುದಿಲ್ಲ. ಹೀಗಾಗಿ ಹಿಂತಿರುಗಿ ನೋಡಿದಾಗ ನಡೆದ ಯಾವ ಘಟನೆಯ ಬಗ್ಗೆಯೂ ನಾನು ಬೇಸರ ಮಾಡಿಕೊಳ್ಳುವುದಿಲ್ಲ. ನನ್ನ ಮನಸಲ್ಲಿ ಯಾವ ಕಹಿಯೂ ಉಳಿದುಕೊಂಡಿಲ್ಲ. ಇಲ್ಲಿ ಸಾಕಷ್ಟು ಒಳ್ಳೆಯ ಅನುಭವಗಳನ್ನೂ ಪಡೆದುಕೊಂಡಿದ್ದೇನೆ. ಬೇರೆ ಯಾವ ಕ್ಷೇತ್ರದಲ್ಲಿದ್ದರೂ ಇಷ್ಟು ಸಂತೋಷವಾಗಿ ಇರಲು ಸಾಧ್ಯವಾಗುತ್ತಿರಲಿಲ್ಲ.

◆ **ಮುಂದೆ ನಟನೆ ಬಿಟ್ಟು ನಿರ್ದೇಶನ, ನಿರ್ಮಾಣಗಳಲ್ಲಿ ತೊಡಗಿಕೊಳ್ಳುವ ಆಸೆಯೇನಾದರೂ ಇದೆಯೇ?**

ಮುಂದೆ ಏನು ಮಾಡುತ್ತೇನೋ ಗೊತ್ತಿಲ್ಲ. ಆದರೆ ಕಳೆದ ಮೂರು ನಾಲ್ಕು ವರ್ಷಗಳಿಂದ ತುಂಬ ಬರೆಯುತ್ತಿದ್ದೇನೆ. ಅದು ಯಾರಿಗೂ ಗೊತ್ತಿಲ್ಲ ಅಷ್ಟೆ. ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಬೇಕು ಎಂದರೆ ಸಾಕಷ್ಟು ತಯಾರಿ ಬೇಕಾಗುತ್ತದೆ. ಗ್ರಹಿಕೆ ಬೇಕಾಗುತ್ತದೆ. ಅದಿಲ್ಲದೇ ಯಾವ ಕೆಲಸವನ್ನೂ ಮಾಡಲಾರೆ. ಮುಂದೆ ಯಾವಾಗಲಾದರೂ ನಿರ್ದೇಶನ ಮಾಡುತ್ತೇನೋ ಇಲ್ಲವೋ ಹೇಳಲಾರೆ. ಬದುಕು ಎಷ್ಟೋ ಸಲ ನಮಗೆ ಗೊತ್ತಿಲ್ಲದ ತಿರುವುಗಳನ್ನೇ ತೆಗೆದುಕೊಳ್ಳುತ್ತದಲ್ಲ. ■



# ಸಂಹಾರಿಣಿ ಪೂಜಾ

‘ದಂಡುಪಾಳ್ಯ’ ಸಿನಿಮಾದ ಮೂರೂ ಭಾಗಗಳಲ್ಲಿ ನಟಿಸಿದ್ದ ಪೂಜಾ ಗಾಂಧಿ ಇತ್ತೀಚೆಗೆ ಸುದ್ದಿಕಟ್ಟೆಯಿಂದ ಕೊಂಚ ಹಿಂದೆ ಸರಿದಿದ್ದರು. ಹಾಗೆಂದು ಅವರೇನೂ ಸುಮ್ಮನೇ ಕೂತಿಲ್ಲ. ಅವಕಾಶದ ಬರವೂ ಬಂದಿಲ್ಲ. ಬದಲಿಗೆ ಸದ್ದಿಲ್ಲದೇ ಒಂದೊಂದೇ ಚಿತ್ರಗಳನ್ನು ಒಪ್ಪಿಕೊಂಡು ಮುಗಿಸುತ್ತಿದ್ದಾರೆ ಪೂಜಾ.

ಅಂದಹಾಗೆ ಅವರು ನಾಯಕಿಯಾಗಿ ನಟಿಸಿರುವ ‘ಸಂಹಾರಿಣಿ’ ಚಿತ್ರದ ಚಿತ್ರೀಕರಣ ಮುಗಿದಿದೆ. ಗರ್ದಿಯಿಲ್ಲದೆ ತನ್ನ ಪಾಡಿಗೆ ತಾನು ಮುಹೂರ್ತ ಮಾಡಿಕೊಂಡು ಚಿತ್ರೀಕರಣದಲ್ಲಿ ತೊಡಗಿದ್ದ ಚಿತ್ರತಂಡವೀಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಇದು ಸಾಹಸಪ್ರಧಾನ ಚಿತ್ರ. ಶೀರ್ಷಿಕೆಯೇ ಹೇಳುವಂತೆ ಮಹಿಳಾಪ್ರಧಾನವೂ ಹೌದು. ‘ಸಂಹಾರಿಣಿ’ಯ ಚಿತ್ರಗಳೇ ಈ ಚಿತ್ರದ ಹೂರಣದ ಬಗೆಗೂ ಸುಳಿವು ನೀಡುವ ಹಾಗಿವೆ.

ಪೂಜಾ ಗಾಂಧಿ ಹಲ್ಲಿನಲ್ಲಿ ಕತ್ತಿಯನ್ನು ಕಚ್ಚಿಕೊಂಡಿರುವ, ಗನ್ ಕೈಯಲ್ಲಿ ಹಿಡಿದು ಹೋರಾಟಕ್ಕೆ ಸಜ್ಜಾಗಿರುವ, ಬೆದರಿ ನಿಂತಿರುವ –ಹೀಗೆ ಹಲವು ಭಾವಭಂಗಿಗಳ ಚಿತ್ರಗಳು ಅವರ ಪಾತ್ರದ ಕುರಿತೂ ಹೇಳುವಂತಿವೆ.

‘ಸಂಹಾರಿಣಿ’ಗೆ ಕೆ. ಜವಾಹರ್ ಎನ್ನುವವರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಬಾಲಿವುಡ್ ನಟ ರಾಹುಲ್ ದೇವ್ ಜೊತೆಗೆ ರವಿ ಕಾಳೆ, ಹ್ಯಾರಿ ಜೋಶ್ ಖಳಪಾತ್ರಗಳಲ್ಲಿ ನಾಯಕಿಯ ಎದುರು ಸೆಣಸಲಿದ್ದಾರೆ. ನಟ ಕಿಶೋರ್ ಕೂಡ ಒಂದು ಪ್ರಧಾನ ಪಾತ್ರದಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ■

# ಸತ್ಯಪ್ರಕಾಶ್‌ಗೆ ಪುನೀತ್ ಸಾಥ್!





‘ಒಂದಲ್ಲಾ ಎರಡಲ್ಲಾ’ ಸಿನಿಮಾದ ನಂತರ ಡಿ. ಸತ್ಯಪ್ರಕಾಶ್ ಏನು ಮಾಡ್ತಿದ್ದಾರೆ? ಈ ಪ್ರಶ್ನೆ ಹಲವರನ್ನು ಕಾಡಿತ್ತು. ಅವರ ಮುಂದಿನ ಸಿನಿಮಾ ಯಾವುದು ಎಂಬ ಸುಳಿವು ಇದುವರೆಗೆ ಬಹಿರಂಗಗೊಂಡಿರಲಿಲ್ಲ. ಆದರೆ ಆ ಕುತೂಹಲಕ್ಕೆ ಈಗ ತೆರೆಬಿದ್ದಿದೆ. ಸತ್ಯಪ್ರಕಾಶ್ ನಿರ್ದೇಶನದ ಮುಂದಿನ ಸಿನಿಮಾಗೆ ನಟ ಪುನೀತ್ ರಾಜ್‌ಕುಮಾರ್ ಸಾಥ್ ನೀಡಲಿದ್ದಾರೆ. ಅಂದರೆ ನಾಯಕನಾಗಿ ನಟಿಸುತ್ತಿದ್ದಾರಾ? ಈ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ. ಆದರೆ ಸತ್ಯಪ್ರಕಾಶ್ ಮುಂದಿನ ಸಿನಿಮಾ ಪುನೀತ್ ಅವರ ‘ಪಿಆರ್‌ಕೆ ಪ್ರೊಡಕ್ಷನ್ಸ್’ ಅಡಿಯಲ್ಲಿ ನಿರ್ಮಾಣವಾಗುತ್ತಿದೆ ಎಂಬ ಮಾಹಿತಿ ಮಾತ್ರ ಬಹಿರಂಗಗೊಂಡಿದೆ.

ಈಗಾಗಲೇ ಪಿಆರ್‌ಕೆ ಪ್ರೊಡಕ್ಷನ್ಸ್‌ನಲ್ಲಿ ನಿರ್ಮಾಣವಾಗಿರುವ ಹೇಮಂತ್ ರಾವ್ ನಿರ್ದೇಶನ ‘ಕವಲುದಾರಿ’ ಸಿನಿಮಾ ತೆರೆಕಂಡಿದೆ. ಜತೆಗೆ ‘ಲಾ’, ‘ಮಾಯಾಬಜಾರ್’ ಸಿನಿಮಾಗಳ ಚಿತ್ರೀಕರಣ ಮುಗಿದಿದೆ. ಜೊತೆಗೆ ಪನ್ನಗ ಭರಣ ನಿರ್ದೇಶನದ ಇನ್ನೊಂದು ಸಿನಿಮಾಕ್ಕೂ ಪುನೀತ್ ಹಣ ಹೂಡಿದ್ದಾರೆ. ಈ ಸಾಲಿಗೆ ಸತ್ಯಪ್ರಕಾಶ್ ಅವರ ಮುಂದಿನ ಸಿನಿಮಾವೂ ಸೇರಿಕೊಂಡಿದೆ. ಸದ್ಯಕ್ಕೆ ಸತ್ಯ, ಚಿತ್ರಕಥೆ ಬರವಣಿಗೆಯಲ್ಲಿ ಮಗ್ನರಾಗಿದ್ದಾರೆ. ಚಿತ್ರದಲ್ಲಿ ಯಾರು ಯಾರು ಅಭಿನಯಿಸಲಿದ್ದಾರೆ, ಯಾವ ಬಗೆಯ ಸಿನಿಮಾ ಎಂಬ ಕುತೂಹಲಕ್ಕ ಉತ್ತರ ಸಿಕ್ಕಲು ಇನ್ನಷ್ಟು ದಿನ ಕಾಯಲೇಬೇಕು. ■